# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 738 (929) |
| ಮಾನ್ಯ ಸದಸ್ಯರ ಹೆಸರು | : | ಶ್ರೀಮತಿ ಬಲ್ಕಿಸ್ ಬಾನು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 15.12.2025. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರವು ವೃತ್ತಿ ಶಿಕ್ಷಣ (ಜೆ.ಓ.ಸಿ) ಕೋರ್ಸ್‌ನ ಮುಚ್ಚುವ ಸಮಯದಲ್ಲಿ ಒಟ್ಟು ಎಷ್ಟು ಸಿಬ್ಬಂದಿಗಳು ಅರೆಕಾಲಿಕ ಬೋಧಕ/ಬೋಧಕೇತರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು; | ಸರ್ಕಾರವು ವೃತ್ತಿ ಶಿಕ್ಷಣ (ಜೆ.ಓ.ಸಿ) ಕೋರ್ಸ್‌ನ ಮುಚ್ಚುವ ಸಮಯದಲ್ಲಿ ಒಟ್ಟು 3746 ಸಿಬ್ಬಂದಿಗಳು ಅರೆಕಾಲಿಕ ಬೋಧಕ/ಬೋಧಕೇತರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. |
| ಆ) | ಈ ಪೈಕಿ ಎಷ್ಟು ಸಿಬ್ಬಂದಿಗಳನ್ನು ಸರ್ಕಾರದ ಅಧಿಸೂಚನೆಯಂತೆ ವಿಲೀನಗೊಳಿಸಲಾಗಿದೆ; ವಿಲೀನಗೊಳಿಸಲು ಬಾಕಿ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; | ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 22 ಶಾಸನ 2011, ಬೆಂಗಳೂರು, ದಿನಾಂಕ:06.04.2011 ಕಂಡಿಕೆ 03 (ಎ) ರನ್ವಯ ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಅರೆಕಾಲಿಕ ನೌಕರರನ್ನು ದಿನಾಂಕ: 06.04.2011 ರ ವರೆಗೆ ಯಾವೊಬ್ಬ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ಆತನಿಗೆ ನೇರವಾಗಿ ಅನ್ವಯಿಸಬಹುದಾದಂತಹ ಕಾರಣಗಳಿಗಾಗಿ ಆತನು ಯಾವುದೇ ಸೇವಾಭಂಗವಿಲ್ಲದೆ 05 ವರ್ಷಗಳಿಗೆ ಕಡಿಮೆ ಇಲ್ಲದಂತೆ ನಿರಂತರವಾಗಿ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನಾಗಿ ಕರ್ತವ್ಯವನ್ನು ನಿರ್ವಹಿಸಿದ್ದ ಹೊರತು ಮೇಲಿನಂತೆ ವಿಲೀನಗೊಳಿಸತಕ್ಕದ್ದಲ್ಲ; ಎಂದು ಸೂಚಿಸಲಾಗಿದೆ.<br><br>ಈ ಹಿನ್ನೆಲೆಯಲ್ಲಿ ಸದರಿ ಅಧಿಸೂಚನೆ ಪೂರ್ವದಲ್ಲಿ 3746 ಅರೆಕಾಲಿಕ ನೌಕರರು ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಸದರಿ ವಿಲೀನ ವಿಧೇಯಕದನ್ವಯ ನಿರಂತರವಾಗಿ 05 ವರ್ಷ ಸೇವೆ ಪೂರೈಸಿದ 1263 ಸರ್ಕಾರಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅರೆಕಾಲಿಕ ನೌಕರರನ್ನು, ವಿವಿಧ ಇಲಾಖೆಗಳಲ್ಲಿ ಮತ್ತು 1668 ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿದ್ದ, ಅರೆಕಾಲಿಕ ನೌಕರರನ್ನು ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ವಿಲೀನಗೊಳಿಸಿ ಸೇವೆಯನ್ನು ಸಕ್ರಮಗೊಳಿಸಲಾಗಿದೆ. |

<table>
<tr><td></td><td></td><td>ಅಧಿಸೂಚನೆ ದಿನಾಂಕ:06.04.2011 ರಂತೆ ಅಧಿಸೂಚನೆ ನಿಯಮ ಕಂಡಿಕೆ 3 (ಎ) ರಂತೆ 05 ವರ್ಷ ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಅರೆಕಾಲಿಕ ನೌಕರರಾಗಿ ನಿರಂತರ ಐದು ವರ್ಷ ಸೇವೆ ಸಲ್ಲಿಸದ (ದಿನಾಂಕ:06.04.2011 ಕ್ಕೆ ) ಉಳಿದ 815 ಅರೆಕಾಲಿಕ ನೌಕರರನ್ನು ವಿಲೀನ ಪ್ರಕ್ರಿಯೆಯಿಂದ ಕೈಬಿಟ್ಟು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿರುತ್ತದೆ.</td></tr>
<tr><td>ಇ)</td><td>ವಿಲೀನಗೊಳಿಸುವಲ್ಲಿ ಆಗಿರುವ ವಿಳಂಬಕ್ಕೆ ಕಾರಣವೇನು;</td><td rowspan="2">ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 22 ಶಾಸನ 2011, ಬೆಂಗಳೂರು, ದಿನಾಂಕ:06.04.2011 ರನ್ವಯ ಅರ್ಹವಿರುವ ವೃತ್ತಿ ಶಿಕ್ಷಣ ಅರೆಕಾಲಿಕ ನೌಕರರನ್ನು ವಿವಿಧ ಇಲಾಖೆಗಳಿಗೆ ವಿಲೀನಗೊಳಿಸುವಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ. ಒಟ್ಟು ಅರ್ಹವಿರುವ 2931 ಅರೆಕಾಲಿಕ ನೌಕರರನ್ನು ವಿಲೀನಗೊಳಿಸಲಾಗಿದೆ.</td></tr>
<tr><td>ಈ)</td><td>ಹಾಗಿದ್ದಲ್ಲಿ, ಸದರಿ ಸಿಬ್ಬಂದಿಗಳನ್ನು ಯಾವ ಕಾಲಮಿತಿಯೊಳಗೆ ವಿಲೀನಗೊಳಿಸಲಾಗುವುದು?</td></tr>
</table>

**ಸಂಖ್ಯೆ: ಇಪಿ 44 ಟಿವಿಇ 2025**

**(ಎಸ್.ಮಧುಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು